# ಪ್ರಳಯ ತಡೆಯದು

ನೀರು ನೀರು ಎಲ್ಲೆಲ್ಲೂ ನೀರು
ಕುಡಿಯಲು ತೊಟ್ಟು ನೀರಿಲ್ಲ!

ಕಗ್ಗಲ್ಲಾಗಿ ನಿಂತೆಯಲ್ಲೇ ತಾಯಿ
ಮಳೆನೀರ ಮಧ್ಯ
ಚಳಿ ಎಂಬುದಿಲ್ಲ, ಮಳೆ ಎಂಬುದಿಲ್ಲ
ಜಲ ಪ್ರಳಯ ತಡೆಯಲಾರದು ನಿನ್ನ!

ಬಾನ ಮಾಡಲು ಒಲೆ ಊಡಲು
ಒಣ ಉರುವಲಿಲ್ಲ, ತೊಟ್ಟು ನೀರಿಲ್ಲ
ಹಸಿದು ಬರಿ ಒಡಲಲ್ಲಿ ಕುಸು ಕುಸು
ಅನ್ನುತಿವೆ ಕಂದಮ್ಮಗಳು

ಬೊಚ್ಚು ಬಾಯಿ ಬಿಟ್ಟುಕೊಂಡು
ತುತ್ತು ಅನ್ನಕ್ಕೆ ಕಾಯುತ್ತಿದ್ದಾರೆ ಅಜ್ಜಅಜ್ಜಿ
ಎಲ್ಲರಿಗೂ ಅನ್ನಪೂರ್ಣೆ ನೀನು
ಇನ್ನೇಕೆ ತಡ ತಾಯಿ ನೀರಿಗೆ ಇಳಿದಾಗಿದೆ.

ತುಂಬು ಕೊಡಗಳ ನಡೆಸು ದೋಣಿಯ
ನಿನ್ನ ಇಚ್ಛೆಯ ಮುಂದೆ ಸೋಲುಂಟೆ?

● **ಶಾಂತ ಡಿ. ಗೌಡ**

# ನೀರುನೀರೆ!

ಬುಡವಿಲ್ಲದ ಕೊಡ
ನಡ ಬಗ್ಗಿಸಿ
ಒತ್ತುತ್ತಲೇ ಇದ್ದ
ಬಡ ಕೈಗಳು
ಸೋತು ಕುಸಿದಿದ್ದಷ್ಟೇ
ಗೊತ್ತು... ಕಣ್ಣು
ಕತ್ತಲಿಡುವ ಮುನ್ನ



ಬೆಚ್ಚಿ ಎಚ್ಚರಾದಾಗ
ಕೊಡ ಇನ್ನೂ ಖಾಲಿ
ಸುತ್ತ ನೋಟ ಹರಿದಷ್ಟೂ
ನೀರ ತುಂಬಿದ್ದು ನಾನಾ?
ಇರಲಾರದು... ಮತ್ತೆ
ಇನ್ನೊಂದು ಜೀವವೂ ಕಾಣೆ

ಅಥವಾ... ಅವನೇ ಇರಬಹುದಾ
ಅಂದು ಸೀರೆ ಕೊಟ್ಟಂತೆ
ನೀರ ಹರಿಯಬಿಟ್ಟನಾ
ಬಿಟ್ಟು ಕೊಳಲೂದುತ್ತಾ
ಆಡುತ್ತಾ... ಹಾಡುತ್ತಾ
ಕುಳಿತುಬಿಟ್ಟನೇನು?

ಆದರೂ ಕೊಡದಡಿಯ
ತೂತು ಮುಚ್ಚದೆ ಅವನೆಷ್ಟು
ಕೊಟ್ಟರೇನು? ಸುಲಭ ಪರಿಹಾರ
ಅಂದೂ ಕೊಡಲಿಲ್ಲ... ಇಂದೂ!

ಈಗಲೂ ಕಾಲ ಮಿಂಚಿಲ್ಲ
ಈ ಕೊಡಗಳಲ್ಲಿ ನೀರು ತುಂಬಿ
ಅವುಗಳೊಂದಿಗೆ ನನ್ನನ್ನೂ
ಮನೆ ಸೇರಿಸಿಬಿಡು ಕೃಷ್ಣಾ
ನಿನ್ನ ಪಾಲಿನ ಬೆಣ್ಣೆ ಕಾದು ಕೂತಿದೆ
ಮನೆಯಲ್ಲಿ!

● **ತಲಕಾಡು ಶ್ರೀನಿಧಿ**